# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಮೇಶ್ ಬಾಬು ಇವರ ನಿಯಮ 330 ರ ಗಮನ ಸೆಳೆಯುವ ಸೂಚನೆಗೆ ಉತ್ತರ.

**ಪ್ರಶ್ನೆ** : ಕರ್ನಾಟಕ ರಾಜ್ಯದಲ್ಲಿ ಸೂರು ಇಲ್ಲದವರಿಗೆ ಸೂರು ಒದಗಿಸುವುದು ರಾಜ್ಯ ಸರ್ಕಾರದ ಒಂದು ಕಾರ್ಯಕ್ರಮವಾಗಿರುತ್ತದೆ. ಸ್ವಾತಂತ್ರ ಬಂದ ನಂತರ ರಾಜ್ಯ ಸರ್ಕಾರಗಳು ಬಡವರಿಗೆ ನಿವೇಶನ ಮತ್ತು ಮನೆಗಳನ್ನು ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಂದಿರುತ್ತದೆ. ಅದರ ಒಂದು ಭಾಗವಾಗಿ ಕರ್ನಾಟಕದಲ್ಲಿ ಸಿ.ಟಿ. ಇಂಪ್ರೂವ್‌ಮೆಂಟ್ ಬೋರ್ಡ್ ಮತ್ತು ಕರ್ನಾಟಕ ಗೃಹ ಮಂಡಳಿ ರಚನೆ ಮಾಡಲಾಗಿರುತ್ತದೆ. ನಿವೇಶನ ರಹಿತರಿಗೆ ರಿಯಾಯಿತಿ ದರದಲ್ಲಿ ನಿವೇಶನ ದೊರಕಿಸಿ ಕೊಡುವ ಉದ್ದೇಶದಿಂದ ಇವುಗಳ ಮೂಲಕ ರಾಜ್ಯ ಸರ್ಕಾರ 50ರ ದಶಕದಲ್ಲಿ ಮತ್ತು 60ರ ದಶಕದಲ್ಲಿ ನಿವೇಶನ ಹಂಚಿಕೆ ಮಾಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿರುತ್ತದೆ. ಯಾರಿಗೆ ನಿವೇಶನದ ಅವಶ್ಯಕತೆ ಇರುತ್ತದೆ. ಅಂತವರು ಸಿಐಟಿಬಿ, ಕರ್ನಾಟಕ ಗೃಹ ಮಂಡಳಿ ಮತ್ತು ಈಗೀನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ನಗರ ಅಭಿವೃದ್ಧಿ ಪ್ರಾಧಿಕಾರಗಳ ಮೂಲಕ ಸರ್ಕಾರ ರಿಯಾಯಿತಿ ದರದಲ್ಲಿ ಸರ್ಕಾರ ನೀಡುವ ನಿವೇಶನಗಳಿಗೆ ಅರ್ಜಿಗಳನ್ನು ಸಲ್ಲಿಸಿ ನಿವೇಶನಗಳನ್ನು ಪಡೆಯಬಹುದಾಗಿರುತ್ತದೆ. ಇವುಗಳಲ್ಲಿ ಬಹಳ ಪ್ರಮುಖವಾಗಿ ಅಂದಿನ ಸಿ.ಐ.ಟಿ.ಬಿ ಮತ್ತು ಈಗಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ 50ರ ದಶಕದಲ್ಲಿ 60ರ ದಶಕದಲ್ಲಿ 70ರ ದಶಕದಲ್ಲಿ ಕೇವಲ ನೂರಾರು ರೂಪಾಯಿಗಳಿಗೆ ಅನೇಕರು ನಿವೇಶನ ಪಡೆದಿರುತ್ತಾರೆ. ಕೆಲವರು ಒಂದೇ ಕುಟುಂಬದವರು ಬೇರೆ ಬೇರೆ ಹೆಸರುಗಳಲ್ಲಿ ಮೂರು ನಾಲ್ಕು ನಿವೇಶನಗಳನ್ನು ಅಥವಾ ಒಂದಕ್ಕಿಂತ ಹೆಚ್ಚು ನಿವೇಶನಗಳನ್ನು ಪಡೆದಿರುತ್ತಾರೆ. ಬೆಂಗಳೂರಿನ ಜಯನಗರ, ಮಲ್ಲೇಶ್ವರಂ, ಜೆ.ಪಿ.ನಗರ, ಕೋರಮಂಗಲ, ರಾಜಾಜಿನಗರ ಮುಂತಾದ ಸ್ಥಳಗಳಲ್ಲಿ ನಿವೇಶನಗಳನ್ನು ಪಡೆದಿರುತ್ತಾರೆ. ಆದರೆ ಕೆಲವರು ತಮ್ಮ ನಿವೇಶನಗಳನ್ನು ಮನೆ ನಿರ್ಮಿಸದೆ ಮನೆ ಕಟ್ಟದೆ ಖಾಲಿ ಉಳಿಸಿಕೊಂಡು ಇಂದಿಗೂ ಸಹ ರಿಯಲ್ ಎಸ್ಟೇಟ್ ವ್ಯವಹಾರವನ್ನು ಮಾಡುತ್ತಿದ್ದಾರೆ. ಇದರಿಂದ ಸರ್ಕಾರದ ಮೂಲ ಉದ್ದೇಶ ಈಡೇರಿರುವುದಿಲ್ಲ. ಯಾರು ಸರ್ಕಾರದಿಂದ ನಿವೇಶನ ಪಡೆದು 40 ವರ್ಷ 50 ವರ್ಷ ಕಳೆದರೂ ಮನೆ ನಿರ್ಮಿಸಿರುವುದಿಲ್ಲವೋ ಅಂತವರು ತಮ್ಮ ನಿವೇಶನಗಳನ್ನು ವಾಣಿಜ್ಯ ವಹಿವಾಟಿಗೆ ಬಳಸಿಕೊಂಡು ಹಣ ಮಾಡುತ್ತಿದ್ದಾರೆ. ಸರ್ಕಾರ 50 ರ 60 ರ 70 ರ ದಶಕದಲ್ಲಿ ನಿವೇಶನ ಪಡೆದು ಇಂದಿಗೂ ಮನೆ ನಿರ್ಮಿಸದೆ ಖಾಲಿ ಇಟ್ಟುಕೊಂಡಿರುವ ಇಂತಹ ನಿವೇಶನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅದನ್ನು ಅವಶ್ಯಕತೆ ಇರುವವರಿಗೆ ಮರುಹಂಚಿಕೆ ಮಾಡುವ ಕುರಿತು.

**ಉತ್ತರ :**

ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿಯ ವ್ಯಾಪ್ತಿಯಲ್ಲಿನ ಕರ್ನಾಟಕ ಗೃಹ ಮಂಡಳಿಯ ಬಡಾವಣೆಗಳಾದ ಜಯನಗರ, ಕೋರಮಂಗಲ, ರಾಜಾಜಿನಗರ ಗಳಲ್ಲಿ ಕರ್ನಾಟಕ ಗೃಹ ಮಂಡಳಿಯ ವತಿಯಿಂದ ಮನೆಗಳನ್ನು ನಿರ್ಮಿಸಿ, ಹಂಚಿಕೆ ಮಾಡಲಾಗಿದೆಯೇ ಹೊರತು ನಿವೇಶನಗಳನ್ನು ಅಭಿವೃದ್ಧಿಪಡಿಸಿ ಹಂಚಿಕೆ ಮಾಡಿರುವುದಿಲ್ಲ.

ಕರ್ನಾಟಕ ಗೃಹ ಮಂಡಳಿಯ ಬಡಾವಣೆಗಳನ್ನು ನಿರ್ವಹಣೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಇಂದಿನ ಗ್ರೇಟರ್ ಬೆಂಗಳೂರು) ಸುಮಾರು 30 ವರ್ಷಗಳ ಹಿಂದೆಯೇ ಹಸ್ತಾಂತರಿಸಿರುವುದರಿಂದ ಯಾವುದೇ ನಿವೇಶನಗಳು ಖಾಲಿ ಇರುವುದಿಲ್ಲ.

ಸಂಖ್ಯೆ: ವಇ 42 ಕಗೃಮಂ 2026

**(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

**Note # 5**

This is a calling attention motion asked by an MLA. KHB has given reply only to certain specific layouts referred by the MLA in his question.
The Hon'ble MLA has asked following:

50 ರ 60 ರ 70 ರ ದಶಕದಲ್ಲಿ ಬೆಂಗಳೂರಿನ ಜಯನಗರ, ಮಲ್ಲೇಶ್ವರಂ, ಜೆ.ಪಿ.ನಗರ, ಕೋರಮಂಗಲ, ರಾಜಾಜಿನಗರ ಮುಂತಾದ ಸ್ಥಳಗಳಲ್ಲಿ" ನಿವೇಶನ ಪಡೆದು ಇಂದಿಗೂ ಮನೆ ನಿರ್ಮಿಸದೆ ಖಾಲಿ ಇಟ್ಟುಕೊಂಡಿರುವ ಇಂತಹ ನಿವೇಶನಗಳ ಕುರಿತು"

whether to limit the answer only to these layouts or to provide answer to all the layouts in Bangalore city needs to be decided by the Hon'ble Minister. File is submitted for orders.

**07/03/2026 01:28 PM**

**Mohanraj K P**
**SECRETARY**

---



File No. DOH/42/KHB/2026-HSD 1-Housing SECRETARIAT (Computer No. 2103166)
Generated from eOffice by Zameer Ahmed Khan, MIN-HOU(ZAK), MINISTER, MINISTER - HOUSING on 07/03/2026 03:45 PM